S C.R.P.67

Form No.4
(Criminal)
Deposition
Sheets
(R.P.No.57)

## 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 387/2018

ಚಾ.ಸಾ.–02  ಪ್ರಾ.ಸಾ.–02

| | |
|---|---|
| **ಸಾಕ್ಷಿದಾರರ ಹೆಸರು** | **ಮಹದೇವ** |
| **ತಂದೆಯ ಹೆಸರು** | **ದುರ್ಗಪ್ಪ ಮಾದರ** |
| **ವಯಸ್ಸು** | **28 ವರ್ಷಗಳು** |
| **ಉದ್ಯೋಗ** | **ಕೂಲಿಕೆಲಸ** |
| **ವಾಸ** | **ಒಬಳಾಪುರ ಗ್ರಾಮ, ಬೆಳಗಾವಿ ಜಿಲ್ಲೆ** |

**ದಿನಾಂಕಃ 30.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 ನನ್ನ ಅತ್ತಿಗೆ. ಮೃತ ಕರಿಯಪ್ಪ ಮಾದರ ನನ್ನ ಅಣ್ಣ. ನಾವು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದೇವೆ.

2) ಚಾಸಾ 3 ರಿಂದ 12 ಪರಿಚಯ ಇಲ್ಲ. 1 ನೆ ಆರೋಪಿಯ ಪರಿಚಯ ಇದೆ. 2 ನೆ ಆರೋಪಿಯ ಪರಿಚಯ ಇಲ್ಲ. ಆರೋಪಿ 1 ಒಬಳಾಪುರ ತಾಂಡ ರಾಮದುರ್ಗ ತಾಲೂಕಿನವರು. 1 ನೆ ಆರೋಪಿ ಲಂಬಾಣಿ ಜಾತಿಯವರು. 2 ನೆ ಆರೋಪಿ ಯಾವ ಊರಿನವರು ಯಾವ ಜಾತಿಯವರು ಗೊತ್ತಿಲ್ಲ. ನನ್ನ ಅಣ್ಣ ಸುಮಾರು 8–9 ವರ್ಷದ ಹಿಂದೆ ಅಂಗರಹಳ್ಳಿ ಗ್ರಾಮದಲ್ಲಿದ್ದ ಕ್ರಶರ್ ನಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಅಂಗರಹಳ್ಳಿ ಶ್ರೀರಂಗಪಟ್ಟಣ ತಾಲೂಕಿನಲ್ಲಿದೆ. ಆ ಜಾಗದಲ್ಲಿ 5–6 ಕುಟುಂಬಗಳು ಕೆಲಸ ಮಾಡುತ್ತಿದ್ದವು. ಕ್ರಶರ್ ಹೆಸರು ನನಗೆ ಗೊತ್ತಿಲ್ಲ. ಅದರ ಮಾಲೀಕರು ಗೊತ್ತಿಲ್ಲ. ನನ್ನ ಅಣ್ಣ ಕೆಲಸ ಮಾಡುತ್ತಿದ್ದ ಕ್ರಶರ್ ನಲ್ಲಿ 1 ನೆ ಆರೋಪಿ ಕೂಡ ಕೆಲಸ

ಮಾಡುತ್ತಿದ್ದರು. ಅವರು ಮೇಸ್ತ್ರಿ ಆಗಿ ಕೆಲಸ ಮಾಡುತ್ತಿದ್ದರು. ಹಾಗಾಗಿ ಅವರ ಪರಿಚಯ ಇದೆ. ನನ್ನ ಅಣ್ಣನನ್ನು ಕೆಲಸಕ್ಕೆ ಯಾರು ಸೇರಿಸಿದ್ದರು ಯಾರು ಕರೆದುಕೊಂಡು ಬಂದಿದ್ದರು ಗೊತ್ತಿಲ್ಲ. ನಾವೆ ಸೇರಿಕೊಂಡಿದ್ದೆವು. ಕ್ರಶರನ ಬಳಿ ಮನೆಯಲ್ಲಿ ನಾವು ವಾಸ ಮಾಡುತ್ತಿದ್ದೆವು. ನಮ್ಮ ಅತ್ತಿಗೆ ಯಾವುದೆ ಕೆಲಸ ಮಾಡುತ್ತಿರಲಿಲ್ಲ. ಸುಮಾರು ದಿವಸಗಳಿಂದ ನನ್ನ ಅಣ್ಣ ಕುಡಿದು ಹೊಟ್ಟೆ ನೋವು ಎಂದು ಹೇಳುತ್ತಿದ್ದರು. ಈ ಬಗ್ಗೆ ಅವರಿಗೆ ಚಿಕಿತ್ಸೆ ಕೊಡಿಸಿದ್ದೆವು. ಆದರು ಕೂಡ ಅವರು ನನಗೆಹೊಟ್ಟೆ ನೋವು ಕಡಿಮೆ ಆಗುವುದಿಲ್ಲ ನಾನು ಸಾಯುತ್ತೇನೆ ಎಂದು ಹೇಳುತ್ತಿದ್ದರು. ಅಲ್ಲಿ ನಮಗೆ ಅಡ್ವಾನ್ಸು ಕೊಟ್ಟು ನಮ್ಮನ್ನು ಒತ್ತಾಯಪೂರಕವಾಗಿ ಕೆಲಸ ಮಾಡಿಸುತ್ತಿರಲಿಲ್ಲ , ನಮಗೆ ಅಡ್ವಾನ್ಸ್ ಕೊಟ್ಟು ಹೊರಗೆ ಹೋಗದಂತೆ ಒತ್ತಾಯ ಮಾಡುತ್ತಿರಲಿಲ್ಲ. ನನ್ನ ಗಂಡ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಅಣ್ಣ ಕೊರೆಯ ಬಳಿ ಇದ್ದ ಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾರೆ. ಈ ವಿಚಾರವನ್ನು ರಸ್ತೆಯಲ್ಲಿ ಓಡಾಡುತ್ತಿರುವವರು ಬಂದು ನನಗೆ ಹೇಳಿರುತ್ತಾರೆ. ನಂತರ ಮೈದುನ , ನಾನು ಸ್ಥಳಕ್ಕೆ ಹೋಗಿದ್ದೇವೆ. ನಾವು ಹೋಗಿ ನೋಡಿದಾಗ ವೈರಿನ ಹಗ್ಗದಲ್ಲಿ ಅವರು ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಕಂಡುಬಂದಿರುತ್ತಾರೆ. ನಂತರ ಅವರನ್ನು ಕೆಳಗೆ ಇಳಿಸಿ ನೀರು ಕುಡಿಸಿದ್ದೇವೆ ಹಾಗೂ ಶ್ರೀರಂಗಪಟ್ಟಣ ಆಸ್ಪತ್ರೆಗೆಸೇರಿದ್ದೇವೆ. ವೈದ್ಯರು ನನ್ನ ಅಣ್ಣ ತೀರಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ , ನಂತರನನ್ನನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಕಳಿಸಿಕೊಟ್ಟಿದ್ದಾರೆ. ನನ್ನ ಅಣ್ಣನ ಸಾವಿನ ಬಗ್ಗೆ ಯಾರ ಮೇಲು ಅನುಮಾನ ಇರುವುದಿಲ್ಲ. ನನ್ನ ಅಣ್ಣನಿಗೆ ಹೆಚ್ಚಾಗಿ ಹೊಟ್ಟೆ ನೋವು ಇದ್ದುದರಿಂದ ಮಧ್ಯಪಾನ ಮಾಡುತ್ತಿದ್ದರಿಂದ ಹೊಟ್ಟೆನೋವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನಾನು ಯಾರ ಮೇಲು ಅನುಮಾನ ಪಟ್ಟು ದೂರು ಕೊಟ್ಟಿರುವುದಿಲ್ಲ.

3) ನನ್ನ ಅಣ್ಣ ಹಾಕಿದ್ದ ಬಟ್ಟೆ ಮತ್ತು ಇತರ ವಸ್ತುಗಳನ್ನು ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಶರ್ಟು , ಪ್ಯಾಂಟು , ಕೈದಾರಗಳನ್ನು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೆ ಮುಮಾ 1 ರಿಂದ 4 ಆಗಿರುತ್ತದೆ. ನಮ್ಮ ಅಣ್ಣ ನೇಣುಹಾಕಿಕೊಳ್ಳಲು ಉಪಯೋಗಿಸಿದ ನೀಲು ವೈರು ಈಗ ನೋಡುತ್ತಿದ್ದೇನೆ ಹಾಗೂ ಸ್ಥಳದಲ್ಲಿ ಇಲ್ಲ ಏರ್ ಫಿಲ್ಟರ್ ನೋಡುತ್ತಿದ್ದೇನೆ , ಅವುಗಳನ್ನು ಈಗಾಗಲೆ ಮುಮಾ 5 , 6 ಎಂದು ಗುರುತಿಸಲಾಗಿರುತ್ತದೆ. ನಾನು ಪೊಲೀಸರಿಗೆ ನನ್ನ ಅಣ್ಣನ

ಸಾವಿನ ಬಗ್ಗೆ ಅನುಮಾನ ಇದೆ ಎಂದು ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರಿಗು ಮತ್ತು ನನ್ನ ಅಣ್ಣನ ಸಾವಿಗು ಸಂಬಂಧ ಇದೆ ಎಂದು ಯಾವುದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

**4)** 1ನೆ ಆರೋಪಿ ನನ್ನ ಅಣ್ಣನನ್ನು ಕೆಲಸಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. 2ನೆ ಆರೋಪಿ ನನ್ನ ಅಣ್ಣ ಕೆಲಸ ಮಾಡುತ್ತಿದ್ದ ಹಂಗರಹಳ್ಳಿಯಲ್ಲಿ ಇರುವ ಎಸ ಎಲ್ ವಿ ಕ್ರಶರ್ ನ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನಮಗೆ 70 ಸಾವಿರ ಮುಂಗಡ ಹಣ ಕೊಟು ಬೇರೆ ಕಡೆ ಹೋಗದಂತೆ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಗಂಡಾಳು ಕಲ್ಲು ಹೊಡೆಯುವ ಕೆಲಸ ಮಾಡುತ್ತಿದ್ದು ಹೆಣ್ಣಾಳು ಕಲ್ಲು ತುಂಬೋ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮಗೆ ಒಂದು ಲೋಡಿಗೆ 150 ರೂ ಮಾತ್ರ ಕೊಡುತ್ತಿದ್ದರು ಎಂದರೆ ಸರಿಯಲ್ಲ. ದಿಃ 9.10.2016ರಂದು ದಸರಾ ಪ್ರಯುಕ್ತ ಎಲ್ಲ ಕೂಲಿಯವರು ದಸರಗೆ ಹೋಗಿದ್ದರು ಎಂದರೆ ಸರಿಯಲ್ಲ. ಆಗ 1ನೆ ಆರೋಪಿ ಎಲ್ಲರನ್ನು ಕರೆಸಿ ಅಲ್ಲಿದ್ದ ಕೆಲಸಗಾರರು ಮಾಡಿದ್ದ ಕೆಲಸಕ್ಕೆ ಅನುಗುಣವಾಗಿ ಹಣವನ್ನು ಲೆಕ್ಕ ಹಾಕಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಆಗ ನನ್ನ ಅಣ್ಣ ಮತ್ತು ನಾನು ನಮ್ಮ ಲೆಕ್ಕ ಹಾಕಿ ಹಣಕೊಡಿ ಎಂದು ಕೇಳಿರುತ್ತೇವೆ ಎಂದರೆ ಸರಿಯಲ್ಲ. ಆಗ 1ನೆ ಆರೋಪಿ ನನ್ನ ಅಣ್ಣನಿಗೆ ನೀನು ಈಗ ಕುಡುದಿದೀಯ ಆಮೇಲೆ ಬಾ ಎಂದು ಹೇಳಿದನು ಎಂದರೆ ಸರಿಯಲ್ಲ. ಆಗ 1ನೆಆರೋಪಿ ನಾವು ಪಡೆದಿರುವ ಅಡ್ವಾನ್ಸ್ ತೀರಿರುವುದಿಲ್ಲ ಇನ್ನು 50 ಸಾವಿರ ರೂ. ನಾವೆ ಕೊಡಬೇಕೆಂದು ನನ್ನ ಅಣ್ಣನಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನ ಅಣ್ಣ ನಾವು ಒಂದು ವರ್ಷಗಳಿಂದ ದುಡಿದಿದ್ದರು ಅಡ್ವಾನ್ಸ್ ತೀರಿಲ್ಲವ ಎಂದು 1ನೆ ಆರೋಪಿಯನ್ನು ಪ್ರಶ್ನಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿ 1 ಹಣ ಇನ್ನು ತೀರಿಲ್ಲ , ಹಣ ಕೊಡಿ ಇಲ್ಲದಿದ್ದರೆ ಅಲ್ಲಿವರೆಗು ಇಲ್ಲಿ ಕೆಲಸ ಮಾಡು ಇಲ್ಲವಾದರೆ ಎಲ್ಲಿಯಾದರು ಹೋಗಿ

ಸಾಯಿ ಎಂದು ಬೋಳಿಮಗನೆ ಸೂಳೆಮಗನೆ ಬೈದರು ಎಂದರೆ ಸರಿಯಲ್ಲ. ಅಲ್ಲದೆ ಅಣ್ಣನಿಗೆ ರಕ್ತಬರುವ ರೀತಿಯಲ್ಲಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಅತ್ತಿಗೆ ನನ್ನ ಅಣ್ಣನನ್ನು ಮನೆಗೆ ಕರೆದುಕೊಂಡು ಬಂದೆವು ಎಂದರೆ ಸರಿಯಲ್ಲ. ನನ್ನ ಅಣ್ಣ ನಂತರ ಕಲ್ಲನ್ನು ಹುಡೆಯಲು ಉಪಯೋಗಿಸುತ್ತಿದ್ದ ಗನ್ನನ್ನು ತೆಗೆದುಕೊಂಡು ಬರುತ್ತೇನೆ ಎಂದು ಹೋಗಿದ್ದರು ಎಂದರೆ ಸರಿಯಲ್ಲ. ನಾನು ಹೂವಿನ ಹಾರ ತೆಗೆದುಕೊಂಡು ಬರುತ್ತೇನೆ ಎಂದು ಹೋಗಿದ್ದೆ ಎಂದರೆ ಸರಿಯಲ್ಲ. ನಂತರ ವಾಪಾಸು ಬಂದು ನನ್ನ ಅಣ್ಣನನ್ನು ಹುಡುಕಿದಾಗ ಆತನು ಮನೆಯಲ್ಲಿ ಇರಲಿಲ್ಲ ಮತ್ತು ಎಲ್ಲಿಯು ಸಿಗಲಿಲ್ಲ ಎಂದರೆ ಸರಿಯಲ್ಲ. ನಂತರ ಚೌಡೇಶ್ವರಿ ಕ್ರಶರ್ ಗೆ ಸೇರಿದ ಒಂದು ಜಾಗದಲ್ಲಿ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಅದೆ ದಿನ 4 ಗಂಟೆಗೆ ಕಂಡುಬಂದರು ಎಂದರೆ ಸರಿಯಲ್ಲ. ನನ್ನ ಅಣ್ಣನ ಸಾವಿಗೆ ಆರೋಪಿತರು ಕಾರಣ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಬೈದ ಕಾರಣ ನನ್ನ ಅಣ್ಣ ಮನನೊಂದು ಅವರು ನೇಣುಬಿಗಿದುಕೊಂಡಿರುವುದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

5) ನಂತರ ಎಲ್ಲ ವಿಚಾರಗಳನ್ನು ನಾನು ಪೊಲೀಸರಿಗೆ ಆರೋಪಿತರೆ ನನ್ನ ಅಣ್ಣನ ಸಾವಿಗೆ ಕಾರಣ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಮ್ಮ ಅಣ್ಣ ಶವ ತನಿಖೆ ಮಾಡುವ ಸಂದರ್ಭದಲ್ಲಿ ಅಂದರೆ 10.10.2018 ರಂದು ನನ್ನನ್ನು ಶವಗಾರದ ಬಳಿ ಪೊಲೀಸರು ಕರೆಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲ ವಿಚಾರಗಳನ್ನು 25.10.2018 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ನಾನು ಮತ್ತು ನನ್ನ ಅಣ್ಣ---------------------ನಿಜವಾದ ಕಾರಣ ತಿಳಿದುಕೊಳ್ಳಲು ಬಯಸುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ನಾನು ಆರೋಪಿತರ ಜೊತೆ ಪ್ರಕರಣ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ತೀರಿಕೊಂಡ ಕಾರಣ ಆರೋಪಿತರ ಜೊತೆ ಶಾಮಿಲಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ಹೊರಗಡೆ ಹೋಗದಹಾಗೆ ನಮ್ಮಿಂದ ದುಡಿಮೆ ಮಾಡಿಸಿಕೊಳ್ಳುತ್ತಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ಎಷ್ಟೆ ದುಡಿದರು ಅಡ್ವಾನ್ಸ್ ಹಣ ತೀರಿಲ್ಲ ಎಂದು ಹೇಳಿ ನಾವು ಎಲ್ಲು ಬೇರೆ ಕಡೆ ಕೆಲಸಕ್ಕೆ

ಹೋಗದೆ ನಮ್ಮನ್ನು ಒತ್ತಾಯಪೂರಕವಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಪ್ರಚೋದನೆ ಮಾಡಿದ್ದರಿಂದ ನನ್ನ ಅಣ್ಣ ನೇಣುಬಿಗಿದುಕೊಂಡು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ನನಗೆ ಗೊತ್ತಿದ್ದರು ನಾನು ಆರೋಪಿತರಿಗೆ ಸಹಾಯವಾಗಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ